ಎಂದು ಅವರು ಕೊರಗುತ್ತಿದ್ದರು. "ನಮ್ಮದೇನಿದೆ, ಎಲ್ಲವೂ ಜಗನ್ಮಾತೆಯ ಇಚ್ಛೆಯಂತೆಯೇ ನಡೆದಿದೆ" ಎಂದು ತಮಗೆ ತಾವೇ ಸಮಾಧಾನ ತಂದುಕೊಳ್ಳುತ್ತಿದ್ದರು. ತಮ್ಮ ಮಗಳನ್ನೂ ತಮಗೆ ಸಹಾಯಕಳಾಗುವಂತೆ ತಮ್ಮ ಜೊತೆಯಲ್ಲಿಯೇ ಕಾಪಾಡಿಕೊಂಡರು. ಆಕೆಯಾದರೋ ತನ್ನ ಬಾಳು ಬರಿದಾಯಿತು ಎಂದು ಭಾವಿಸದೆ, ದಿವ್ಯತಪಸ್ವಿನಿಯಾಗಿ ತನ್ನ ಬಾಳನ್ನು ಜಗನ್ಮಾತೆಗೆ ಸಮರ್ಪಿಸಿಕೊಂಡಳು. ಪರಮಹಂಸರು ಆಕೆಗೆ ಮಾಡಿದ್ದ ಆಶೀರ್ವಾದ ವ್ಯರ್ಥವಾಗಲುಂಟೆ!

**ಸಾವಿನ ಹಾಸುಗೆಯಲ್ಲಿ ಯೋಗೀಶ್ವರ:** ರಾಮಕೃಷ್ಣ ಮಹಾಸಂಘವು ಸ್ಥಾಪನೆಗೊಂಡಮೇಲೆ (೧೮೯೭) ಯೋಗಾನಂದರು ಅದರ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ವಿವೇಕಾನಂದರ ವಿಷಯದಲ್ಲಿ ವಿಶೇಷವಾದ ಗೌರವವು ಅವರ ಹೃದಯದಲ್ಲಿತ್ತು. ವಿವೇಕಾನಂದರು ಮುಟ್ಟಿದ್ದೆಲ್ಲ ಚಿನ್ನವಾಗುತ್ತದೆ ಎಂಬ ಭಾವನೆ ಅವರದಾಗಿತ್ತು. ಕಠಿಣವಾದ ತಪಶ್ಚರ್ಯೆಯಿಂದಾಗಿ ಅವರ ದೇಹಾರೋಗ್ಯ ಕುಸಿಯತೊಡಗಿತು. ಅದನ್ನು ಕಂಡ ವಿವೇಕಾನಂದರು ಅವರನ್ನು ಡಾರ್ಜಿಲಿಂಗ್, ಆಲ್ಮೋರಾ ಮುಂತಾದ ಹಿಮಾಲಯದ ಆರೋಗ್ಯಧಾಮಗಳಿಗೆ ಕರೆದೊಯ್ದು ಚಿಕಿತ್ಸೆ ಮಾಡಿಸಿದರು. ಅದರಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ.

ದಕ್ಷಿಣೇಶ್ವರಕ್ಕೆ ಮರಳಿ ಬಂದಮೇಲೆ ಶ್ರೀಮಾತೆಯವರು ಯೋಗಾನಂದರ ಪೂರ್ವಾಶ್ರಮದ ಪತ್ನಿಯನ್ನು ಅವರ ಸೇವೆಗಾಗಿ ನಿಯೋಜಿಸಿದರು. ಅದು ಯೋಗಾನಂದರಿಗೆ ಮುಜುಗರವೆನಿಸಿತಾದರೂ ಶ್ರೀಮಾತೆಯ ಆಜ್ಞೆಗೆ ಎದುರಾಡುವಂತಿಲ್ಲ. ಆ ಹೊತ್ತಿನಲ್ಲಿ ಶ್ರೀಮಾತೆಯವರು, "ಆಕೆಗೆ ಏನಾದರೂ ಆಧ್ಯಾತ್ಮಿಕ ಉಪದೇಶಗಳನ್ನು ಕೊಡು, ಮಗನೇ" ಎಂದು ಹೇಳಿದರು. ಆಗ ಯೋಗಾನಂದರು, "ಅದಕ್ಕೆ ತಾನು ಸಮರ್ಥನಲ್ಲ. ನೀವೇ ಆಕೆಯ ಯೋಗಕ್ಷೇಮವನ್ನು ಹೊತ್ತುಕೊಂಡು ಉಪದೇಶಕೊಡಬೇಕು, ತಾಯೇ" ಎಂದು ಪ್ರಾರ್ಥಿಸಿದರು.

ತಮ್ಮ ಕೊನೆಗಾಲದಲ್ಲಿ ಯೋಗಾನಂದರು ಕ್ಷಯ, ಜ್ವರ ಮತ್ತು ಅತಿಸಾರಗಳಿಂದ ಬಾಧೆಪಟ್ಟರು. ಅವರ ದೇಹ ಎಲುಬಿನ ಗೂಡಾಯಿತು. ವಿಷಯ ತಿಳಿದ ತಂದೆತಾಯಿಗಳು ದುಃಖತಪ್ತರಾಗಿ ನೋಡಲೆಂದು ಬಂದರು. ಯೋಗಾನಂದರು, "ನಿಮಗೆ ಭಗವದ್ಭಕ್ತಿ ಪ್ರಾಪ್ತವಾಗಲಿ ಎಂದಷ್ಟೇ ನಾನು ಪ್ರಾರ್ಥಿಸುತ್ತೇನೆ" ಎಂದು ತಮ್ಮ ಕ್ಷೀಣವಾಗಿದ್ದ ಧ್ವನಿಯಲ್ಲಿ ಹೇಳಿದರು. ಕಾಯಿಲೆ ಪ್ರಬಲವಾಗುತ್ತಿದ್ದಂತೆ ವಿವೇಕಾನಂದರು, "ಯೋಗೇನ್, ನೀನು ಗುಣಮುಖನಾಗು. ನಿನ್ನ ಬದಲಿಗೆ ನಾನು ಪ್ರಾಣಕೊಡುತ್ತೇನೆ, ಆಗಬಹುದೇ?" ಎಂದರು. ಆ ಮಾತಿನಿಂದ ಚಕಿತರಾದ ಯೋಗಾನಂದರು, "ಎಲ್ಲಾದರೂ ಉಂಟೆ, ನೀನು ನಮ್ಮ ಸಂಘದ ಚೂಡಾರತ್ನವಲ್ಲವೆ, ಪ್ರಾರಬ್ಧಕರ್ಮವನ್ನು ಯಾರು ತಾನೆ ಮೀರಬಲ್ಲರು?" ಎಂದು ಸಮಾಧಾನ ಚಿತ್ತರಾಗಿ ನುಡಿದರು.


**ಸದ್ಗುರುವಿನಲ್ಲಿ ಲೀನವಾದರು:** ಆರುತಿಂಗಳು ಹಾಸುಗೆ ಹಿಡಿದು ಮಲಗಿದ ಯೋಗಾನಂದರು ತಾವು ಮುಕ್ತರಾಗಲಿರುವ ದಿನವು ಬಂದುದನ್ನು ಗುರುತಿಸಿಕೊಂಡುಬಿಟ್ಟರು. "ಅಮ್ಮಾ, ಅಲ್ಲಿ ನೋಡಿ. ನನ್ನನ್ನು ಕರೆದೊಯ್ಯಲು ಶ್ರೀರಾಮಕೃಷ್ಣರು ಬ್ರಹ್ಮ ವಿಷ್ಣು ಮಹೇಶ್ವರರೊಡಗೂಡಿ ಬಂದಿದ್ದಾರೆ" ಎಂದು ಹೇಳಿದರು. ಶ್ರೀಮಾತೆಯು ಈ ದೃಶ್ಯವನ್ನು ನೋಡಿದರು. ೨೮.೩.೧೮೯೯ ರಂದು ಶ್ರೀರಾಮಕೃಷ್ಣರ ಸ್ಮರಣೆಯಲ್ಲಿಯೇ ಅವರನ್ನು ಸೇರಿಕೊಂಡರು. "ನನ್ನ ಯೋಗೇನ್ ನನ್ನನ್ನು ಅಗಲಿ ಹೊರಟುಹೋದ. ಇನ್ನುಮುಂದೆ ನನ್ನನ್ನು ನೋಡಿಕೊಳ್ಳುವವರಾರು" ಎಂದು ಶ್ರೀಮಾತೆ ಕಂಬನಿಮಿಡಿದರು.

ಯೋಗಾನಂದರು ಒಮ್ಮೆ ಯಾವಾಗಲೋ ಶ್ರೀಮಾತೆಯವರಿಗೆ ಚೆನ್ನಾದ ಶಾಲೊಂದನ್ನು ಕಾಣಿಕೆಯಾಗಿ ಅವರಿಗೆ ಕೊಟ್ಟಿದ್ದರು. ಅದು ಕಾಲಕ್ರಮದಲ್ಲಿ ಕೊಂಚ ಹರಿದುಹೋಗಿತ್ತು. ಅದನ್ನು ಹೊಲಿದುಕೊಡಲೆಂದು ಒಮ್ಮೆ ಯಾರೋ ಕೈಯಿಕ್ಕಿದರು. "ಯೋಗೇನ್ ಕೊಟ್ಟುದನ್ನು ಹಾಗೆಯೇ ಇಟ್ಟುಕೊಳ್ಳಬೇಕು. ಹೊಲಿಗೆ ಹಾಕಿ ವಿಕಾರಗೊಳಿಸುವುದು ಬೇಡ" ಎಂದು ಶ್ರೀಮಾತೆ ತಡೆದುಬಿಟ್ಟರು.

**ಉಪದೇಶಗಳು :** ಯೋಗಾನಂದರ ಬದುಕಿನ ಜೀವನಶೈಲಿಯಲ್ಲಿಯೇ ನಾವು ಸ್ವೀಕರಿಸಬೇಕಾದ ಹಲವು ಉಪದೇಶಗಳು ಅಡಕಗೊಂಡಿವೆ: ೧. ವರಾಹನಗರದ ಮಠದಲ್ಲಿ ಒಮ್ಮೆ ಬೈಬಲ್ ಗ್ರಂಥದ ಪಠಣವಾಗುತ್ತಿದ್ದಾಗ. "ನೀವು ಪರಸ್ಪರ ಪ್ರೀತಿಸಿರಿ" ಎಂಬ ಬೈಬಲ್ ವಾಕ್ಯವನ್ನು ಕೇಳಿದಾಗ, "ಈ ಒಂದು ವಾಕ್ಯವನ್ನು ಬದುಕಿಗೆ ಅಳವಡಿಸಿಕೊಂಡರೆ ಇಡೀ ಬೈಬಲನ್ನು ಅಧ್ಯಯನ ಮಾಡಿದ್ದಕ್ಕೆ ಸಮ" ಎಂದು ಯೋಗಾನಂದರು ಉದ್ಗರಿಸಿದರು. ಒಬ್ಬರಿಗೊಬ್ಬರು ಪ್ರೇಮಾದರಗಳಿಂದ ಕಾಣುವ ಗುಣವೇ ಬದುಕಿನ ಆದರ್ಶವಾಗಬೇಕೆಂಬ ಉಪದೇಶ ಆ ಉದ್ಗಾರದಲ್ಲಿದೆ. ೨. ಮಾನವಸಂಬಂಧಗಳು ಬಲು ಸೂಕ್ಷ್ಮ. ಅಲ್ಲಿ ಸ್ವಾರ್ಥವೇ ಮುಂದಾದರೆ ಅದು ಎಲ್ಲ ಸಂಬಂಧಗಳನ್ನೂ ನುಂಗಿಬಿಡುತ್ತದೆ. ೩. ಸದ್ಗುರುವನ್ನು ಪರೀಕ್ಷೆಮಾಡಿಯೇ ಸ್ವೀಕರಿಸಬೇಕು. ಅವರನ್ನು ಹಗಲಿನಲ್ಲಿ ಮಾತ್ರವಲ್ಲ, ರಾತ್ರಿಯಲ್ಲಿಯೂ ಪರೀಕ್ಷಿಸಬೇಕು. ೪. ಮನಸ್ಸಿನಂತೆ ಮಾತು, ಮಾತಿನಂತೆ ಮನಸ್ಸು ಇರಬೇಕಾದುದು ಬದುಕಿನ ಶ್ರೇಷ್ಠವಾದ ಮೌಲ್ಯ. ೫. ಸಾಧಕನು ತೇಲುನಿದ್ರೆಯವನಾಗಿರಬೇಕು, ಗಾಢನಿದ್ರಾಸಕ್ತನಾದರೆ ಗುರಿಮುಟ್ಟುವುದು ಸಾಧ್ಯವಿಲ್ಲ. ೬. ದೇಹಧಾರಿಯು ಅದಕ್ಕೊದಗುವ ಸಂಕಷ್ಟಗಳನ್ನು ಅನುಭವಿಸಲೇಬೇಕು. ಪ್ರಾರಬ್ಧಕರ್ಮವನ್ನು ತಪ್ಪಿಸಿಕೊಳ್ಳುವಂತಿಲ್ಲ. •

## ಆಶ್ಚರ್ಯ ತರಿಸುವ ದೃಶ್ಯಗಳು

ನಾವು ನೋಡಿದ ಎರಡು ದೃಶ್ಯಗಳನ್ನು ಮರೆಯುವಂತಿಲ್ಲ. ಮೊದಲಿನದು ಗಂಗೆಯ ದಂಡೆಯ ಮೇಲಿದ್ದ ನೀಲಧರ ಎಂಬ ತಾತ್ಕಾಲಿಕ ಪಟ್ಟಣ. ಅದು ಬೈರಾಗಿ ಅಖಾಡ ಸಾಧುಗಳ ಶಿಬಿರ. ಅರುವತ್ತು, ಎಪ್ಪತ್ತು ಬೈರಾಗಿ ಅಖಾಡಗಳು ಇಲ್ಲಿ ಬೀಡುಬಿಟ್ಟಿದ್ದವು. ದೊಡ್ಡ ತಿಲಕ, ನಾಮಗಳನ್ನು ಧರಿಸಿದ ಭಕ್ತರು, ಬೈರಾಗಿಗಳು ತಮ್ಮ ತಮ್ಮ ಸಾಂಪ್ರದಾಯಿಕ ಕ್ರಿಯಾಕರ್ಮಗಳಲ್ಲಿ ಮುಂಜಾನೆ ಸಂಜೆ ತೊಡಗಿರುತ್ತಿದ್ದರು. ಪ್ರವಚನ, ಆರತಿ, ಪ್ರಸಾದವಿತರಣೆ ನಡೆಯುತ್ತಲಿತ್ತು. ರಾಮ, ಕೃಷ್ಣರ ಚರಿತ್ರೆಗಳ ಬಗೆಗಿನ ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ಇದ್ದವು. ಕೆಲವು ಶಿಬಿರಗಳಲ್ಲಿ ಸುಸ್ವಾಗತ ಕೋರುವ ಸುಂದರ ಕಮಾನುಗಳು, ರಚನೆಗಳು ಕಾಣುತ್ತಿದ್ದವು. ಒಂದರಲ್ಲಿ ಪೋಲಿಯೋ ರೋಗಿಗಳಿಗಾಗಿ ಉಚಿತ ವೈದ್ಯಕೀಯ ವ್ಯವಸ್ಥೆ ಕೂಡ ಇತ್ತು. ಮಕ್ಕಳಿಗೆ ಉಚಿತ ಶಸ್ತ್ರಚಿಕಿತ್ಸೆ ನಡೆಸುತ್ತಿದ್ದರು. ಪಕ್ಕದಲ್ಲಿಯೆ, ವಾರ್ಡ್‌ಗಳಂತೆ ಇದ್ದ ಗುಡಾರದಲ್ಲಿ ಅವರು ಚೇತರಿಸಿಕೊಳ್ಳುವುದನ್ನು ನೋಡಬಹುದಿತ್ತು. ಕೆಲವರಿಗೆ ಕೃತಕ ಕಾಲುಗಳನ್ನು ಕೂಡ ಒದಗಿಸಿದ್ದರು. ತಮ್ಮ ಸೇವಾಕಾರ್ಯಕ್ರಮಗಳ ಬಗ್ಗೆ ಆ ಸಂಸ್ಥೆಯವರು ಒಂದು ಪ್ರದರ್ಶನವನ್ನೂ ಏರ್ಪಡಿಸಿದ್ದರು.



ಇನ್ನೊಂದು, ಬೈರಾಗಿ ಅಖಾಡಾದಲ್ಲಿ ಧುನಿಯ (ಪವಿತ್ರಾಗ್ನಿ) ಸುತ್ತ ಜನ ಕುಳಿತು ಧ್ಯಾನ, ಜಪ ಮಾಡುತ್ತಿರುವ ದೃಶ್ಯ ಬಹಳ ಪ್ರೇರಣಾದಾಯಕವಾಗಿತ್ತು. ಹೀಗೆ ಅನೇಕ ಎಕರೆಗಳಷ್ಟು ವಿಶಾಲ ವಾದ ಬೈರಾಗಿ ಕ್ಯಾಂಪ್‌ಗಳು ಬಣ್ಣಬಣ್ಣದ ಗುಡಾರಗಳಿಂದ ಕಂಗೊಳಿಸುತ್ತಿದ್ದವು. ಜನಗಳ ಓಡಾಟದಿಂದ ಧೂಳಿನ ಮೋಡವೇ ಅಲ್ಲಿ ಕವಿದಿತ್ತು. ಆದರೆ ರಾತ್ರಿಯ ನೋಟ ಇದಕ್ಕಿಂತ ವಿಭಿನ್ನವಾಗಿತ್ತು; ಭಜನೆ, ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮ, ಪ್ರಚಾರ – ಇವುಗಳಿಂದ ಕೂಡಿತ್ತು. ಈ ಕುಂಭಮೇಳವು ನಿಜಕ್ಕೂ ಧರ್ಮಮೇಳವೇ ಸರಿ. ಇಂಥದೇ ವ್ಯವಸ್ಥೆ ದಶನಾಮಿ ಸಂನ್ಯಾಸಿಗಳಿಗೂ ಇತ್ತು. ದ್ವಾರಕಾ ಮತ್ತು ಪುರಿ ಶಂಕರಾಚಾರ್ಯರ ಮಠಗಳ ಶಿಬಿರಗಳು ಅಲ್ಲಿದ್ದವು. ಈ ನಗರ ಸ್ವಲ್ಪಮಟ್ಟಿಗೆ ಶಾಂತವಾಗಿ ಕಂಡಿತು.

ಜುನಾ ಮತ್ತು ನಿರ್ವಾಣಿ ಅಖಾಡಾಗಳಿಗೆ ಭೇಟಿಕೊಟ್ಟದ್ದು ಇನ್ನೊಂದು ರೀತಿಯ ಅನುಭವವೆಂದೇ ಹೇಳಬೇಕು. ಹರಿದ್ವಾರದ ಮಧ್ಯೆ ಇರುವ ಮಾಯಾದೇವಿ ದೇವಸ್ಥಾನದ ಸುತ್ತ, ಎರಡು ಮಹಡಿಗಳ ಕೆಲವು ಕಟ್ಟಡಗಳನ್ನು ಜುನಾ ಅಖಾಡಾ ಒಳಗೊಂಡಿದೆ. ಒಂದೆರಡು ಬೀದಿಗಳನ್ನು ದಾಟಿದರೆ, ಅದರದೇ ಆದ ಸ್ನಾನಘಟ್ಟ ಕೂಡ ಇದೆ. ಜುನಾ ಅಖಾಡಾದ ಶಿಬಿರದಲ್ಲಿ ನಾಗಾ ಸಾಧುಗಳು ಇರುವ ಬಿಡಾರಗಳಿವೆ. ಧುನಿಯ ಸುತ್ತ ಕುಳಿತು, ಚಿಲುಮೆ ಸೇದುತ್ತ, ಮೈತುಂಬ ಬೂದಿ ಬಳಿದುಕೊಂಡು ಕುಳಿತಿರುವ ಸಾಧುಗಳನ್ನು ಅಲ್ಲಿ ಕಾಣಬಹುದು. ಅವರನ್ನು ಭೇಟಿಮಾಡಿ, ಗೌರವವನ್ನು ಅರ್ಪಿಸಲು ಬಂದ ಭಕ್ತರಿಗೆ ಅವರು ಸುಟ್ಟ ಬೂದಿಯನ್ನು ಪ್ರಸಾದವಾಗಿ ನೀಡುತ್ತಾರೆ. ನವಿಲು ಗರಿಯಿಂದ ಮಾಡಿದ ಗುಚ್ಛದಿಂದ ತಲೆಯನ್ನು ಮುಟ್ಟಿ ಆಶೀರ್ವದಿಸುತ್ತಾರೆ. ಅಥವಾ ತಮ್ಮಲ್ಲಿರುವ ಚಿಮುಟದಿಂದ ತಟ್ಟುತ್ತಾರೆ.

ಹನ್ನೆರಡು ವರ್ಷಗಳಿಂದ ಬಲಗೈಯನ್ನು ಮೇಲಕ್ಕೆ ಎತ್ತಿ ಹಿಡಿದುಕೊಂಡಿರುವ ನಾಗಾ ಸಾಧುವೊಬ್ಬರ ದರ್ಶನ ವಾಯಿತು. ಈ ಸಾಧನೆಯ ಹಿಂದಿನ ತರ್ಕ ನಮಗೆ ತಿಳಿಯಲಿಲ್ಲವಾದರೂ, ಅವರ ಇಚ್ಛಾಶಕ್ತಿಯನ್ನು ನಿಜವಾಗಿಯೂ ಮೆಚ್ಚಿಕೊಂಡೆವು. ಭಾರತದಲ್ಲಿ ಧಾರ್ಮಿಕ ಉದ್ದೇಶಕ್ಕಾಗಿ ಜನರು ಅಸಾಮಾನ್ಯ ಕಾರ್ಯಗಳನ್ನು ಕೂಡ ಮಾಡುತ್ತಾರೆ ಎಂಬ ಸ್ವಾಮಿ ವಿವೇಕಾನಂದರ ಮಾತು ಅದೆಷ್ಟು ಸತ್ಯ!


ಪಾಶ್ಚಾತ್ಯ ಜನರ ಮನಸ್ಸಿಗೆ ಹೋಲಿಸಿದರೆ, ಪೌರಸ್ತ್ಯ ಜನರ ಮನಸ್ಸು ಈ ರೀತಿ ಸಹಜವಾಗಿ ವರ್ತಿಸುತ್ತದೆ. ಈ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ನೀವು (ಪಾಶ್ಚಾತ್ಯರು) ಐದು ಜನ ಸೇರಿ ಒಂದು ಜಂಟಿ ವ್ಯಾಪಾರ ಕಂಪನಿಯನ್ನು ಪ್ರಾರಂಭಿಸಲು ನಿರ್ಧರಿಸುತ್ತೀರಿ. ಹಾಗೆ ಮಾಡಿ, ಅದನ್ನು ಐದು ಗಂಟೆಗಳಲ್ಲಿ ಸಾಧಿಸುತ್ತೀರಿ, ಕೂಡ. ಭಾರತೀಯರಿಗೆ ಐವತ್ತು ವರ್ಷವಾದರೂ ಇದನ್ನು ಮಾಡಲು ಆಗುವುದಿಲ್ಲ. ಅವರು ಇಂಥ ವಿಷಯಗಳಲ್ಲಿ

ಅಪ್ರಯೋಜಕರು. ಆದರೆ ತತ್ತ್ವಶಾಸ್ತ್ರದಲ್ಲಿ ಹೊಸ ಶಾಖೆಯನ್ನು ಅವರಲ್ಲಿ ಯಾರಾದರೂ ಆರಂಭಿಸಿದರೆಂದುಕೊಳ್ಳಿ. ಅವರಿಗೆ ನೂರಾರು ಜನರು ಅನುಯಾಯಿಗಳಾಗುವರು. ಒಂದು ಕಾಲನ್ನು ಎತ್ತಿಹಿಡಿದು ನಿಂತುಕೊಂಡರೆ, ಮೋಕ್ಷ ದೊರೆಯುತ್ತದೆ ಎಂದು ಪ್ರಚಾರ ಮಾಡಿ. ನೂರಾರು ಜನ ನೋವನ್ನು ಲೆಕ್ಕಿಸದೆ ಒಂದೇ ಕಾಲ ಮೇಲೆ ನಿಲ್ಲಲು ಮುಂದಾಗುವರು. ನಾನು ನೋಡಿರುವಂತೆ ಅನೇಕರು ಒಂದು ಕೈಯನ್ನು  ಎತ್ತಿಕೊಂಡು ವರ್ಷಗಳ ಕಾಲ ನಿಂತು ಕೊಳ್ಳುತ್ತಾರೆ. ನೆನಪಿಡಿ. ಅವರೆಲ್ಲ ಅಜ್ಞಾನಿಗಳಾಗಲಿ, ಮೂರ್ಖರಾಗಲಿ ಅಲ್ಲ. ತಮ್ಮ ಆಳವೂ ವಿಸ್ತಾರವೂ ಆದ ಜ್ಞಾನದಿಂದ ನಮ್ಮನ್ನು ಅವರು ಬೆರಗುಗೊಳಿಸಬಲ್ಲರು. (ಇವರ ವಿಷಯದಲ್ಲಿ) 'ಪ್ರಾಯೋಗಿಕ' ಎಂಬ ಪದವೂ ಸಾಪೇಕ್ಷವಾಗುವುದು."

ಅಖಾಡಾದಲ್ಲಿ ಸಾಧುಗಳ ರೀತಿನೀತಿಗಳು ಬಗೆಬಗೆಯಾಗಿರುತ್ತವೆ. ಜುನಾ ಅಖಾಡಾದಲ್ಲಿ ವಿಶಿಷ್ಟರೀತಿಯಲ್ಲಿ ಉಡುಪುಗಳನ್ನು ಧರಿಸಿರುವ ಸಾಧುಗಳು ಕಂಡುಬರುತ್ತಾರೆ.  ನಿರ್ವಾಣಿ ಅಖಾಡಾದಲ್ಲಿ ಸಾಧುಗಳಿಗಾಗಿ ಏರ್ಪಡಿಸಿದ್ದ ಔತಣದಲ್ಲಿ (ಭಂಡಾರ) ಪಾಲ್ಗೊಂಡೆವು. ಅನೇಕ ಭಕ್ತರು ಸಾವಿರಕ್ಕೂ ಹೆಚ್ಚು ಸಾಧುಗಳಿಗೆ ಕಾಣಿಕೆ ಸಲ್ಲಿಸುತ್ತಿದ್ದರು. ಉಳಿದವರು ಗೌರವದಿಂದ ದೂರನಿಂತು, ಸಾಧುಗಳು ಆಹಾರ ತೆಗೆದುಕೊಳ್ಳುವುದನ್ನು ನೋಡುತ್ತ ಸಂತೋಷಪಡುತ್ತಿದ್ದರು.  ಅದೊಂದು ಪವಿತ್ರ ದೃಶ್ಯವಾಗಿತ್ತು.

**ಪವಿತ್ರಸ್ನಾನ**

ಮುಖ್ಯಸ್ನಾನದ ದಿನ ಬಂದುಬಿಟ್ಟಿತು. ಆ  ದಿನದಂದು ಎಲ್ಲಾ ಅಖಾಡಾಗಳಿಗೆ ಸೇರಿದ ಸಾಧುಗಳು ಬಹಳ ದೊಡ್ಡ ವೈಭವಯುತ ಮೆರವಣಿಗೆಯಲ್ಲಿ ಹರೀ ಕೀ ಪೌರಿ ಸ್ನಾನಘಟ್ಟದಲ್ಲಿ ಸ್ನಾನಮಾಡಲು ಬರುತ್ತಾರೆ. ಇದನ್ನು 'ಶಾಹಿಸ್ನಾನ' ಎಂದು ಕರೆಯುತ್ತಾರೆ. ಬ್ರಹ್ಮಕುಂಡದಲ್ಲಿ ಸಾಧುಗಳು  ಸ್ನಾನಮಾಡುವಾಗ ಅಲ್ಲಿ ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ.



ಪವಿತ್ರಸ್ನಾನವು ಅನೇಕ ಪರ್ವದಿನಗಳಂದು ನಡೆಯುತ್ತದೆ. ಆದರೆ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಮುಖವಾದ ಸ್ನಾನವು ೧೪.೪.೨೦೧೦ ರಂದು ಜರುಗಿತು. ಅಂದು ಬಂಗಾಳಿಗಳಿಗೆ, ಪಂಜಾಬಿಗಳಿಗೆ ಮತ್ತು ತಮಿಳು ಜನರಿಗೆ ಹೊಸ ವರ್ಷದ ಉತ್ಸವದ ದಿನವಾಗಿತ್ತು.

ಪ್ರತಿಯೊಂದು ಅಖಾಡಾ ಕೂಡ ತನ್ನದೇ ಆದ ಮೆರವಣಿಗೆ ಯನ್ನು ಹೊರಡಿಸುತ್ತದೆ. ಅದನ್ನು 'ಪೇಶ್ವಾಯಿ' ಎಂದು ಕರೆಯುತ್ತಾರೆ. ಒಂದಾದಮೇಲೊಂದರಂತೆ ಈ ಮೆರವಣಿಗೆಗಳು ಸಾಲಿನಲ್ಲಿ ಬಂದು, ಜನರ ಮನಸೆಳೆಯುತ್ತವೆ.  ಪವಿತ್ರಸ್ನಾನ ಮಾಡಲೆಂದು ವಿವಿಧ ಅಖಾಡಾದ ಸಾಧುಗಳಿಗೆ ವಿವಿಧ ವೇಳೆಗಳನ್ನು ನಿಗದಿಪಡಿಸಿರುತ್ತಾರೆ.  ಆಯಾ ಅಖಾಡಾಗಳ ಮುಖ್ಯಸ್ಥರಾದ ಮಂಡಲೇಶ್ವರ ಸ್ವಾಮಿಗಳನ್ನು ಅಲಂಕೃತ ರಥದಲ್ಲಿ ಕೊಂಡೊಯ್ಯಲಾಗುತ್ತದೆ. ಛತ್ರ, ಹಾರ, ಚಾಮರ, ಸಿಂಹಾಸನಗಳ ವೈಭವ ಇರುತ್ತದೆ. ಅಲಂಕಾರ ಮಾಡಿದ ಆನೆ ಕುದುರೆಗಳೂ ಇರುವುದುಂಟು. ಆ ರಥಗಳ (ದೊಡ್ಡ ಲಾರಿಯನ್ನು ಅಲಂಕಾರ ಮಾಡಿರುತ್ತಾರೆ) ಹಿಂದೆ ಮತ್ತು ಮುಂದೆ ಕಾವಿ ಬಾವುಟಗಳನ್ನು ಅಥವಾ ಓಂಕಾರವೇ ಮೊದಲಾದ ಧಾರ್ಮಿಕ ಚಿಹ್ನೆಗಳನ್ನು ಹಿಡಿದ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಬರುತ್ತಿರುತ್ತಾರೆ. ಭಜನೆ, ಸ್ತೋತ್ರಗಳು, ಜೈಕಾರಗಳು, ಬ್ಯಾಂಡುಗಳು – ಇವೆಲ್ಲದರ ಶಬ್ದ ವಾತಾವರಣವನ್ನು ತುಂಬಿರುತ್ತದೆ.

ಪ್ರತಿಯೊಂದು ಮೆರವಣಿಗೆಯಲ್ಲಿಯೂ ಆಯಾ ಅಖಾಡಾಕ್ಕೆ ಸೇರಿದ ಧರ್ಮಧ್ವಜವನ್ನು ಅದರ ಮಹಂತರು ಅಥವಾ ಪೀಠಾಧಿಪತಿಗಳು ಹಿಡಿದಿರುತ್ತಾರೆ. ರಥದಲ್ಲಿ ಆಯಾ ಅಖಾಡಾದ ಆದಿಗುರು ಅಥವಾ ಮುಖ್ಯ ದೇವತೆಯ ಲೋಹದ ಪ್ರತಿಮೆ ಕೂಡ ಇರುತ್ತದೆ. ಇಬ್ಬರು ನಾಗಾಸಾಧುಗಳು ಕುದುರೆಗಳ ಮೇಲೆ ಕುಳಿತು, ಡೋಲು ಬಾರಿಸುತ್ತ, ಮುಂದೆ ಸಾಗುತ್ತಿರುತ್ತಾರೆ. ಅಖಾಡಾದ ಹಲವಾರು ಶಾಖೆ ಉಪಶಾಖೆಗಳ, ಮಠಗಳ ರಥಗಳು ಹಿಂದೆ ಬರುತ್ತ ಇರುತ್ತವೆ. ಕೆಲವು ಸಾಧುಗಳು ಕಾವಿಯಲ್ಲಿ ಸುತ್ತಿರುವ ದಂಡಗಳನ್ನು, ತ್ರಿಶೂಲಗಳನ್ನು ಹಿಡಿದುಕೊಂಡು ಹೋಗುತ್ತಿರುತ್ತಾರೆ.

ಕೆಲವು ಮಹಾಮಂಡಲೇಶ್ವರರು ಇನ್ನೂ ಯುವಕರಾಗಿದ್ದರು. ಮಠಾಧಿಪತಿಗಳಲ್ಲಿ ಕೆಲವರು ಮಹಿಳೆಯರೂ ಇದ್ದರು. ಮೊದಲು ದಶನಾಮಿ ಸಾಧುಗಳ ಗುಂಪುಗಳು ಹೋಗುತ್ತವೆ. ಅನಂತರವಷ್ಟೆ ಬೈರಾಗಿ ಸಾಧುಗಳ